**ದಿನಾಂಕ 16-10-2019 ರಂದು ಅಪರಾಹ್ನ 4.30 ಗಂಟೆಗೆ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಚಾಲೆಂಜ್ ಫಂಡ್ ಯೋಜನೆಯಡಿ ಸೃಜನಾತ್ಮಕವಾದ ಹಾಗೂ ಪರಿಣಾಮಕಾರಿಯಾದ ಯೋಜನೆಗಳ ಜಾರಿ ಕುರಿತಾದ ಪ್ರಸ್ತಾವನೆಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ ನಡೆದ ಸಭೆಯ ನಡವಳಿಗಳು:**

**ಸಭೆಯಲ್ಲಿ ಉಪಸ್ಥಿತರಿದ್ದವರು.**

1. ಶ್ರೀಮತಿ ವಂದಿತ ಶರ್ಮ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.
2. ಶ್ರೀ ವಿ. ಮಂಜುಲ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಿಆಸುಇ (ಆಡಳಿತ ಸುಧಾರಣೆ), ಬಹುಮಹಡಿಗಳ ಕಟ್ಟಡ, ಬೆಂಗಳೂರು
3. ಶ್ರೀಮತಿ ಶಾಲಿನಿ ರಜನೀಶ್, ಸರ್ಕಾರದ ಪ್ರಧಾನ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ
4. ಶ್ರೀಮತಿ ಪಿ. ಹೇಮಲತ, ಸರ್ಕಾರದ ಕಾರ್ಯದರ್ಶಿ, ವೈದ್ಯಕೀಯ ಶಿಕ್ಷಣ ಇಲಾಖೆ.
5. ಶ್ರೀ ಪ್ರಶಾಂತ್ ಮಿಶ್ರ, ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ.
6. ಡಾ|| ಸಿ. ರಾಮಚಂದ್ರ, ನಿರ್ದೇಶಕರು, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ, ಬೆಂಗಳೂರು.
7. ಡಾ|| ಅಮೃತ್.ಎಸ್ ಕದಂ, ರಾಜ್ಯ ಸಮನ್ವಯಾಧಿಕಾರಿ, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
8. ಶ್ರೀ ಎಂ.ಬಿ. ವಿಜಯ ಕುಮಾರ್, ಸರ್ಕಾರದ ಜಂಟಿ ಕಾರ್ಯದರ್ಶಿ, ಸಿಆಸುಇ (ಇ-ಆಡಳಿತ).
9. ಶ್ರೀ ಪುರುಷೋತ್ತಮ ಸಿಂಗ್, ವಿಶೇಷಾಧಿಕಾರಿ (ಜಿ.ಪಂ), ಆರ್ಥಿಕ ಇಲಾಖೆ.
10. ಶ್ರೀ ಜಿ.ಆರ್.ಚಂದ್ರನ್, ಪ್ರಾಜೆಕ್ಟ್ ಮ್ಯಾನೇಜ್ ಮೆಂಟ್ ಕನ್ ಸಲ್ಟಂಟ್, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ, ಬೆಂಗಳೂರು.

***

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಿಆಸುಇ (ಆಡಳಿತ ಸುಧಾರಣೆ) ಇವರು ಸರ್ಕಾರದ ಮುಖ್ಯ ಕಾರ್ಯದರ್ಶಿಯವರನ್ನು, ಸಮಿತಿ ಸದಸ್ಯರನ್ನು ಮತ್ತು ಸಭೆಯಲ್ಲಿ ಉಪಸ್ಥಿತರಿದ್ದ ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಚಾಲೆಂಜ್ ಫಂಡ್ ಯೋಜನೆಯ ಉದ್ದೇಶ ಮತ್ತು ಅನುಸರಿಸಬೇಕಾದ ಮಾರ್ಗಸೂಚಿಗಳ ಬಗ್ಗೆ ತಿಳಿಸಿದರು. ಚಾಲೆಂಜ್ ಫಂಡ್ ಯೋಜನೆಯಡಿ 2010-11 ರಿಂದ 2018-19ರವರೆಗೆ ಅನುದಾನ ಬಿಡುಗಡೆ ಮಾಡಿದ ಒಟ್ಟು 14 ಪೈಲಟ್ ಯೋಜನೆಗಳ ಬಗ್ಗೆ ಪ್ರಾತ್ಯಕ್ಷಿಕೆ ಮೂಲಕ ವಿವರಿಸಿದರು.

2. 2019-20ರ ಸಾಲಿಗೆ ಚಾಲೆಂಜ್ ಫಂಡ್ ಯೋಜನೆಯಡಿ ರೂ. 300.00 ಲಕ್ಷಗಳ ಅನುದಾನ ಒದಗಿಸಲಾಗಿರುವುದನ್ನು ಸಭೆಯ ಗಮನಕ್ಕೆ ತಂದರು.

3. ಚಾಲೆಂಜ್ ಫಂಡ್ ಯೋಜನೆಯಡಿ 2019-20ರ ಸಾಲಿಗೆ ಅನುದಾನ ಕೋರಿ ಈ ಕೆಳಕಾಣಿಸಿದ ಪ್ರಸ್ತಾವನೆಗಳನ್ನು ಸ್ವೀಕರಿಸಿರುವ ಬಗ್ಗೆ ಸಭೆಯ ಗಮನ ಸೆಳೆದರು.

| ಕ್ರ.ಸಂ. | ಯೋಜನೆಯ ಹೆಸರು | ಯಾರಿಂದ ಬಂದಿದೆ | ಪರಿಶೀಲಿಸಿದ ಅಂಶಗಳ ವಿವರ |
|---|---|---|---|
| 1 | Water Literacy Foundation Grey water recharge in Koratagere Taluk of Tumkur District | ತುಮಕೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ | ಖಾಸಗಿ ಏಜೆನ್ಸಿಯ ಪ್ರಸ್ತಾವವನ್ನು ಯಾವುದೇ ಮೌಲ್ಯಮಾಪನ ಮಾಡದೆ ಕಳುಹಿಸಲಾಗಿದೆ ಪ್ರಸ್ತಾವನೆಯಲ್ಲಿ ಪ್ರಸ್ತಾಪಿಸಲಾದ ಹೆಚ್ಚಿನ ಕಾರ್ಯಕ್ರಮಗಳನ್ನು ಎಂಜಿಎನ್‌ಆರ್‌ಇಜಿಎ ಅಡಿಯಲ್ಲಿ ತೆಗೆದುಕೊಳ್ಳಬಹುದು |
| 2 | Procurement of Computers etc for implementation of e-office | ಪೋಲೀಸ್ ಅಧೀಕ್ಷಕರು, ಚಿತ್ರದುರ್ಗ | ಒಳಾಡಳಿತ ಇಲಾಖೆಯ ಆಯವ್ಯಯದಲ್ಲಿ ಭರಿಸಬಹುದಾದಸಾಮಾನ್ಯವಾದ ಪ್ರಸ್ತಾವನೆ.ಶಿಫಾರಸ್ಸು ಮಾಡಲಾಗಿಲ್ಲ. |
| 3 | Chatbot Service | ಪೊಲೀಸ್ ಇಲಾಖೆ | ಇತ್ತೀಚೆಗೆ ಸ್ವೀಕರಿಸಿದ ಪ್ರಸ್ತಾವನೆ ಕಾರ್ಯಸಾಧ್ಯವೆಂದು ಕಂಡುಬಂದಲ್ಲಿ ಪರೀಕ್ಷಿಸಿ ಮುಂದಿನ ಸಭೆಯಲ್ಲಿ ಇರಿಸಲಾಗುವುದು |
| 4 | Establishment of Karnataka State Data hub. | ಯೋಜನಾ ಇಲಾಖೆ | ಪ್ರಸ್ತಾಪ ಅಪೂರ್ಣ ಮತ್ತು ಅಸ್ಪಷ್ಟವಾಗಿದೆ ಹಬ್ ಹೇಗೆ ಕಾರ್ಯರೂಪಕ್ಕೆ ಬರಲಿದೆ ಎಂಬುದರ ಕುರಿತು ಇಲಾಖೆ ವಿವರಿಸಿಲ್ಲ. |
| 5 | IOT based Monitoring and Laboratory equipment interfacing with e-hospital at Medical Education Institutions | ವೈದ್ಯಕೀಯ ಶಿಕ್ಷಣ ಇಲಾಖೆ | ಪ್ರಸ್ತಾವನೆಯನ್ನು ಪರಿಗಣಿಸಬಹುದು |
| 6 | Picture Archival & Communication System (PACS), Radiology Information System (RIS) | ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ, ಬೆಂಗಳೂರು | ಪ್ರಸ್ತಾವನೆಯನ್ನು ಪರಿಗಣಿಸಬಹುದು |

4. ಮೇಲ್ಕಂಡ ಪ್ರಸ್ತಾವನೆಗಳಲ್ಲಿವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದಿಂದ ಬಂದಂತಹ IOT based Monitoring and Laboratory equipment interfacing with e-hospital at Medical Education Institutions ಪ್ರಸ್ತಾವನೆ ಹಾಗೂ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ Picture Archival & Communication System (PACS), Radiology Information System (RIS) ಪ್ರಸ್ತಾವನೆಗಳ ಬಗ್ಗೆ ಪ್ರಸ್ತಾಪಿಸಿದರು. ವೈದ್ಯಕೀಯ ನಿರ್ದೇಶನಾಲಯದ IOT ಪೈಲೆಟ್ ಯೋಜನೆಗೆ ಒಟ್ಟು ರೂ. 1,93,07,500/- ಹಾಗೂ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ PACS ಮತ್ತು RIS ಯೋಜನೆಗಾಗಿ ರೂ. 245.00 ಲಕ್ಷಗಳ ಪ್ರಸ್ತಾವನೆ ಬಗ್ಗೆ ಕ್ರಮವಾಗಿ ರಾಜ್ಯ ಸಮನ್ವಯಾಧಿಕಾರಿ, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ಹಾಗೂ ನಿರ್ದೇಶಕರು, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯವರು ಪ್ರಾತ್ಯಕ್ಷಿಕೆ ಮೂಲಕ ಸಭೆಗೆ ವಿವರಣೆ ನೀಡಿದರು.

5. ಈ ಎರಡೂ ಪ್ರಸ್ತಾವನೆಗಳನ್ನು ಸಭೆಯಲ್ಲಿ ಕೂಲಂಕಷವಾಗಿ ಪರಿಶೀಲಿಸಲಾಯಿತು. ಈ ಪ್ರಸ್ತಾವನೆಗಳು ಪೈಲೆಟ್ ಪ್ರಸ್ತಾವನೆಗಳಾಗಿದ್ದು, ಈ ಕೆಳಕಾಣಿಸಿದ ಅಂಶಗಳನ್ನು ಪಾಲಿಸುವ ಷರತ್ತಿಗೊಳಪಟ್ಟು ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯಕ್ಕೆ ಹಾಗೂ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಗೆ 2019-20ರ ಸಾಲಿಗೆ ಕ್ರಮವಾಗಿ ಒಟ್ಟು ರೂ. 1,93,07,500/- ಹಾಗೂ ರೂ. 1,44,00,000/-ಗಳ ಅನುದಾನವನ್ನು ಮಂಜೂರು ಮಾಡಲು ಒಪ್ಪಲಾಯಿತು.

1. ಕೆಟಿಪಿಪಿ ಕಾಯ್ದೆಯನ್ನು ಅನುಸರಿಸತಕ್ಕದ್ದು.
2. ಯೋಜನೆಯ ಪುನರಾವರ್ತಿತ ಖರ್ಚುಗಳನ್ನು ತಮ್ಮದೇ ಸಂಪನ್ಮೂಲದಿಂದ ಅಥವಾ ಸರ್ಕಾರ ಆಯವ್ಯಯ ಒದಗಿಸುವ ಅನುದಾನ ಮಿತಿಯೊಳಗೆ ಭರಿಸತಕ್ಕದ್ದು.

6. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ Trashcon ಎಂಬ ತ್ಯಾಜ್ಯ ನಿರ್ವಹಣೆ ಯೋಜನೆಯ ಬಗ್ಗೆ ಪ್ರಸ್ತಾವನೆಯೊಂದನ್ನು ನಿರೀಕ್ಷಿಸಲಾಗಿದ್ದು, ಅದನ್ನು ಬೆಂಗಳೂರು ಮಹಾನಗರ ಪಾಲಿಕೆಯಿಂದ ಪಡೆಯುವಂತೆ ಸೂಚಿಸಲಾಯಿತು.

**(ಕ್ರಮ: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಿಆಸುಇ (ಆಸು)**

7. ಪೊಲೀಸ್ ಇಲಾಖೆಯಿಂದ CHATBOT Service-2, Karnataka State Police Department ಈ ಯೋಜನೆಯ ಬಗ್ಗೆ ಪ್ರಸ್ತಾವನೆಯು ತಡವಾಗಿ ಇಲಾಖೆಯಲ್ಲಿ ಸ್ವೀಕೃತವಾಗಿರುವುದನ್ನು ಸಭೆಯ ಗಮನಕ್ಕೆ ತರಲಾಯಿತು. ಈ ಪ್ರಸ್ತಾವನೆಯು ಪರಿಣಾಮಕಾರಿಯಾದ ಯೋಜನೆಯಾಗಿರುವುದನ್ನು ಗಮನಿಸಿ ಈ ಬಗ್ಗೆ ಪರಿಶೀಲಿಸುವಂತೆ ಸೂಚಿಸಲಾಯಿತು.

**(ಕ್ರಮ: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಿಆಸುಇ (ಆಸು)**

8. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ತ್ಯಾಜ್ಯ ನಿರ್ವಹಣೆ ಯೋಜನೆಗಾಗಿ 2019-20ರ ಸಾಲಿನಲ್ಲಿ ರೂ. 60.00 ಲಕ್ಷಗಳ ಅನುದಾನವನ್ನು ಹಾಗೂ ಪೊಲೀಸ್ ಇಲಾಖೆಯ CHATBOT ಯೋಜನೆಗಾಗಿ ರೂ. 20.00 ಲಕ್ಷಗಳ ಅನುದಾನವನ್ನು ಮಂಜೂರು ಮಾಡಲು ಒಪ್ಪಲಾಯಿತು.

9. 2019-20ರ ಸಾಲಿಗೆ ಚಾಲೆಂಜ್ ಫಂಡ್ ಯೋಜನೆಯಡಿಲ್ಲಿ ರೂ. 300.00 ಲಕ್ಷಗಳನ್ನು ಒದಗಿಸಲಾಗಿದ್ದು, ಮೇಲ್ಕಾಣಿಸಿದ 4 ಯೋಜನೆಗಳಿಗೆ ಒಟ್ಟು ರೂ. 4,17,07,500/- ವೆಚ್ಚವಾಗಲಿದ್ದು, ಹೆಚ್ಚುವರಿಯಾಗಿ ಬೇಕಾಗುವ ಅನುದಾನವನ್ನು ಮುಂದಿನ ಸಾಲು ಅಂದರೆ 2020-21ರ ಸಾಲಿಗೆ ಸರಿದೂಗಿಸಲು ನಿರ್ಧರಿಸಲಾಯಿತು.

ವಂದನೆಗಳೊಂದಿಗೆ ಸಭೆಯು ಮುಕ್ತಾಯವಾಯಿತು.

ಕಡತ ಸಂ: ಸಿಆಸುಇ 09 ಎಎಆರ್ 2019,
ದಿನಾಂಕ: 24-10-2019

**(ತ.ಮ. ವಿಜಯ್ ಭಾಸ್ಕರ್)**
ಸರ್ಕಾರದ ಮುಖ್ಯ ಕಾರ್ಯದರ್ಶಿ